Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 925/2025

ಸಿ ಡಬ್ಲ್ಯೂ- 15

ಪಿ ಡಬ್ಲ್ಯೂ- 08

| | |
|---|---|
| ಸಾಕ್ಷಿದಾರರ ಹೆಸರು | ಃ- ಡಾ. ಪ್ರವೀಣಕುಮಾರ |
| ತಂದೆಯ ಹೆಸರು | ಃ- ಲಿಂಗಪ್ಪ |
| ವಯಸ್ಸು | ಃ- 27 ವರ್ಷ |
| ಉದ್ಯೋಗ | ಃ- ವೈದ್ಯರು |
| ವಾಸಸ್ಥಳ | ಃ- ಕಸಬಾಲಿಂಗಸುಗೂರು |

**ದಿ.04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ**

ನಾನು ದಿನಾಂಕ 12-02-2025 ರಿಂದ 30-08-2025 ವರೆಗೆ ವೈದ್ಯರಾಗಿ ಲಿಂಗಸುಗೂರಿನ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿನಾಂಕ 24-03-2025 ರಂದು ಮದ್ಯಾಹ್ನ 2-15 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾ.ಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನನ್ನ ಮುಂದೆ ಹಾಜರಾಗಿದ್ದರು. ನಾನು ಅವರನ್ನು ಪರೀಕ್ಷಿಸಿರುತ್ತೇನೆ.

ಚಾ.ಸಾ-1 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಬಲ ಬುಜದ ಮೇಲೆ 2 * 2 ಸೆ.ಮಿ. ಕಂದುಗಟ್ಟಿದ ಗಾಯ ಕಂಡು ಬಂದಿರುತ್ತದೆ. ಸದರಿ ಗಾಯ ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-12 ಎಂದು. ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು. ಸದರಿ ನೋವುಗಳು ಬೂಟು ಮತ್ತು ಬೆಲ್ಟನಿಂದ ಹೊಡೆದರೆ ಆಗುವ ಸಾದ್ಯತೆ ಇದೆ.

**ಪಾಟೀ ಸವಾಲುಃ ಶ್ರೀ. ಎ.ಸಿ.ಪಿ ವಕೀಲರಿಂದ :-**

ಚಾ.ಸಾ-1 ರವರಿಗೆ ಬುಜದ ಮೇಲೆ ಬಿಟ್ಟು ಬೇರೆ ಗಾಯ ಇರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಮನೆಯಲ್ಲಿ ಪಿಠೋಪಕರಣಗಳ ಮೇಲೆ ಬಿದ್ದರೆ ನಿ.ಪಿ-12 ರಲ್ಲಿರುವ

ಗಾಯಗಳು ಆಗುವ ಸಾದ್ಯತೆ ಇದೆ ಎಂದರೆ ಸರಿ. ಬುಜದ ಮೇಲೆ ಇರುವ ಗಾಯ ಸಾಮಾನ್ಯ ಸ್ವರೂಪದ್ದು ಎಂದರೆ ಸರಿ.

ಮರು ವಿಚಾರಣೆ ಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಇದೆ**

ಸಹಿ/-

ಪ್ರಧಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಲಿಂಗಸುಗೂರು.